O.S **06/2020**

P.W.1

ಸಾಕ್ಷಿಯನ್ನು ದಿಃ 06-08-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಎಮ್. ಎಸ್.ಪಿ. ಪ್ರತಿವಾದಿ ನಂ. **1** ಮತ್ತು **2** ಪರ ವಕೀಲರಿಂದ

ನಾನು ಪಿ.ಯು.ಸಿ. ವರೆಗೆ ವ್ಯಾಸಂಗ ಮಾಡಿರುತ್ತೇನೆ.1 ನೇ ಪ್ರತಿವಾದಿಯು ಮಿಲಟರಿಯಲ್ಲಿ ಸೇವೆ ಸಲ್ಲಿಸುತ್ತಿದ್ದರು. 2 ನೇ ಪ್ರತಿವಾದಿಯು ಹುಬ್ಬಳ್ಳಿಯಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. 3 ನೇ ಪ್ರತಿವಾದಿಯು 1 ಮತ್ತು 2 ನೇ ಪ್ರತಿವಾದಿಯೊಂದಿಗೆ ವಾಸ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಶಿರಹಟ್ಟಿ ತಾಲೂಕಿನ ಹೆಬ್ಬಾಳದಲ್ಲಿ ಒಬ್ಬರೆ ವಾಸಿಸುತ್ತಿದ್ದಾರೆ ಹಾಗೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಗೆ ಹಾಲಪ್ಪ, ಶಿವಪ್ಪ, ಕಲ್ಲಪ್ಪ, ಶಂಕ್ರಪ್ಪ ಬಸವಣ್ಣೆಪ್ಪ ಎಂಬ ಸಹೋದರರು ಇರುತ್ತಾರೆ. ನನ್ನ ತಂದೆಗೆ ಇಬ್ಬರೂ ಸಹೋದರಿಯರು ಇದ್ದು ಅವರ ಹೆಸರುಗಳು ನನಗೆ ನೆನಪು ಇರುವುದಿಲ್ಲ. ನನ್ನ ತಂದೆಯ ಸಹೋದರ ಸಹೋದರಿಯರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಅವರಿಗೆ ಪಕ್ಷಗಾರರನ್ನಾಗಿ ಮಾಡಲು ಯಾವುದೇ ಸಮಸ್ಯೆ ಇರಲಿಲ್ಲ. ನನ್ನ ತಂದೆ ಮತ್ತು ಸಹೋದರರು ಆಸ್ತಿಯನ್ನು ಹಂಚಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಸಹೋದರರು ಆಸ್ತಿಯನ್ನು ಹಂಚಿಕೊಂಡಿರುತ್ತಾರೆ. ಯಾವ ದಿನಾಂಕದಂದು ಹಂಚಿಕೆ ಮಾಡಿಕೊಂಡಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳಲ್ಲಿ ನನ್ನ ತಂದೆ ಮತ್ತು ಸಹೋದರರು ಆಸ್ತಿಯನ್ನು ಹಂಚಿಕೆಕೊಂಡ ಬಗ್ಗೆ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಹಾಗೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ಸಹೋದರರು ಆಸ್ತಿ ಹಂಚಿಕೊಳ್ಳುವ ಸಮಯದಲ್ಲಿ ಅವರಿಗೆ ಯಾವುದೇ ಭಾಗವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ತಮ್ಮ ಆದಾಯವನ್ನು ನನ್ನ ತಂದೆ ಒಟ್ಟು ಕುಟುಂಬಕ್ಕೆ ನೀಡುತ್ತಿದ್ದರು ಎಂದರೆ ಸರಿಯಲ್ಲ.

2.ನನ್ನ ಮದುವೆಯನ್ನು ನನ್ನ ತಂದೆ ಮತ್ತು ಸಹೋದರರು ಮಾಡಿರುತ್ತಾರೆಂದರೆ ಸಾಕ್ಷಿಯು ನನ್ನ ತಾಯಿಯ ತಂದೆ ಮಾಡಿರುತ್ತಾರೆಂದು ನುಡಿಯುತ್ತಾರೆ. ನಾನು ತಾಯಿಯ ತಂದೆ ನನ್ನನ್ನು ಬೆಳೆಸಿ ದೊಡ್ಡವರನ್ನಾಗಿ ಮಾಡಿರುತ್ತಾರೆ.

3.ದಾವಾ ಆಸ್ತಿಯನ್ನು ಹೊರತು ಪಡಿಸಿ ಒಂದು ಮನೆ ಇರುತ್ತದೆ ಅದರಲ್ಲಿಯೂ ಸಹ ನನ್ನ ಭಾಗವನ್ನು ಕೇಳಿರುತ್ತೇನೆ. ನಮ್ಮ ಮನೆಯ ಖಾತಾ ಎಕ್ಸಟ್ರ್ಯಾಕ್ಟ ನನಗೆ ಗೊತ್ತಿರುವುದಿಲ್ಲ. ಸುಮಾರು 20 ವರ್ಷದಿಂದ ನಾನು ನನ್ನ ತವರು ಮನೆಗೆ ಹೋಗಿರುವುದಿಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಭಾಗವನ್ನು ಕೇಳಿಕೊಂಡು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. 2018 ರಲ್ಲಿ ಆಸ್ತಿಯಲ್ಲಿ ಭಾಗವನ್ನು ಕೇಳಿಕೊಂಡು ಗದಗಿನ ನನ್ನ ಮನೆಯಲ್ಲಿ ನನ್ನ ಸಹೋದರ ಮಾವಂದಿರಾದ ಹೇಮಣ್ಣ, ಸಂಗಣ್ಣ ಮತ್ತು ಅಶೋಕ ಇವರುಗಳ ಮಧ್ಯಸ್ಥಿಕೆಯಲ್ಲಿ ಕೇಳಿರುತ್ತೇನೆ.

4.ಪ್ರತಿವಾದಿಗಳ ಹೆಸರಿನಲ್ಲಿ ಕಂದಾಯ ದಾಖಲೆಗಳು ಇರುವುದನ್ನು ಪ್ರಶ್ನಿಸಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನನ್ನ ಮತ್ತು ಪ್ರತಿವಾದಿಗಳ ನಡುವೆ ಸಂಬಂಧವು ಸರಿ ಇರುವುದಿಲ್ಲ. ಆದ್ದರಿಂದಲೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದೆನೆಂದರೆ ಸರಿಯಲ್ಲ.

**(3 ನೇ ಪ್ರತಿವಾದಿ ಗೈರು ಹಾಜರು ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)**

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

Sd/- 06.08.2025
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ

ಸಾಕ್ಷಿದಾರರ ಸಹಿಃ sd/-